# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-152 ಎಸ್.ಜಿ.ಪಾಳ್ಯ
## ಕಛೇರಿಯಲ್ಲಿ ದಿನಾಂಕ: 21.11.2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

* * * * * *

ದಿನಾಂಕ-21-11-2020ರಂದು ನಡೆಸಲಾದ ವಾರ್ಡ್ ಮಟ್ಟದ ನಾಗರೀಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನ, ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಎಸ್.ಪ್ರಭಾಕರ್, ಮುಖ್ಯ ಅಭಿಯಂತರರು (ಪೂರ್ವ)ಬಿ.ಬಿ.ಎಂ.ಪಿ. | 9480685379 |
| 2 | ಶ್ರೀ.ಸತೀಶ್.ಡಿ ಸ.ಇಂ-152 ವಾರ್ಡ್ | 9964310730 |
| 3 | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| 4 | ಶ್ರೀ. ಎನ್.ಓಬಳೇಶ್,ಹಿರಿಯ ಆರೋಗ್ಯಾ ಪರಿವೀಕ್ಷಕರು | 9945042307 |
| 5 | ಶ್ರಿ ನವೀನ್ ಎಸ್. ಕಂದಾಯ ಪರಿವೀಕ್ಷಕರು | 9902388885 |
| 6 | ಶ್ರೀ. ಕೆ.ವೆಂಕಟೇಶ್ ಬಾಬು ಎ.ಎಸ್.ಐ | 9448684480 |
| 7 | ಶ್ರೀ ಪುರುಷೋತ್ತಮ, (ಎಲೆಕ್ಟ್ರೀಕಲ್, ಬಿ.ಬಿ.ಎಂ.ಪಿ) | 9611177415 |
| 8 | ಶ್ರೀ.ನಾಗರಾಜ ಎಸ್ ಪಿ.ಎಸ್.ಐ | 9902206329 |
| 9 | ಶ್ರೀ. ಹರೀಶ್.ಹೆಚ್.ಪಿ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ | 9538897735 |
| 10 | ಶ್ರೀಮತಿ.ಆಶಾ.ಹೆಚ್. ಸಹಾಯಕ ಅಭಿಯಂತರರು ಬೆಸ್ಕಾಂ | 9900724229 |
| 11 | ಶ್ರೀ. ಮಂಜುನಾಥ ವಾರ್ಡ್ ಮೇಲ್ವಿಚಾರಕರು | 9740903427 |
| 12 | ಶ್ರೀ ಜೆನ್‌ಸನ್ ಕೆ.ಜೆ. ಮುಖ್ಯಸ್ಥರು ಭುವನಪ್ಪ & ಕಾವೇರಿ ಬಡಾವಣೆ | 9886263222 |

1) ಬಿದಿ ದೀಪಗಳ ನಿರ್ವಹಣೆ ಬಗ್ಗೆ.

ಕಳೆದ ಸಭೆಯಲ್ಲಿ ಪ್ರಸ್ತಾಪಿಸಲಾಗಿದ್ದ ಚಿಕ್ಕಾಡುಗೋಡಿ, ಸೆಂಟ್‌ಜಾನ್ಸ್ ವಸತಿ ಗೃಹದ ಪಾದಚಾರಿ ಮಾರ್ಗಗಳಲ್ಲಿ ಬೀದಿ ದೀಪಗಳಿಗೆ ಲೈಟ್ ಫಿಟಿಂಗ್ಸ್ ಇಲ್ಲದಿರುವ ಪ್ರಸ್ತಾವನೆ ಮಾಡಲಾಗಿತು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಸೆಂಟ್‌ಜಾನ್ಸ್ ಸಿಗ್ನಲ್ ಹತ್ತಿರ ಬೀದಿ ದೀಪಗಳು ಉರಿಯುತ್ತಿರುವುದಿಲ್ಲ ಎಂದು ದೂರಿದ್ದರು.

ಮೇಲಿನ ದೂರಿನ ಬಗ್ಗೆ ಬಿ.ಬಿ.ಎಂ.ಪಿ ವಿದ್ಯುತ್ ವಿಭಾಗರವರಿಂದ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

2) ಘನತ್ಯಾಜ್ಯ ನಿರ್ವಹಣೆ ಬಗ್ಗೆ.

ಕಳೆದ ಸಭೆಯಲ್ಲಿ ಅಧ್ಯಕರು ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿನ ವಾಣಿಜ್ಯ ತ್ಯಾಜ್ಯ ಸಂಗ್ರಹಣೆ ವಿವರಗಳನ್ನು ಶ್ರೀ.ಓಬಲೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಮುಂದಿನ ಸಭೆಯಲ್ಲಿ ಸಲ್ಲಿಸಲು ತಿಳಿಸಲಾಗಿತ್ತು.

ಈ ಸಂಬಂಧ ಕಳೆದ ಸಭೆಯಲ್ಲಿ ಕೇಳಲಾಗಿದ್ದ ವಿವರವನ್ನು ಸಲ್ಲಿಸಲು ಮತ್ತೊಮ್ಮೆ ವಿಫಲರಾಗಿರುವುದರಿಂದ ವಿಷಾದವ್ಯಕ್ತಪಡಿಸಿ, ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ವಾಣಿಜ್ಯ ತ್ಯಾಜ್ಯ ಸಂಗ್ರಹಣೆ ವಿವರಗಳನ್ನು ಸಲ್ಲಿಸಲು ತಿಳಿಸಿದರು.

ವಾರ್ಡ್ ವ್ಯಾಪ್ತಿಯ ದಿನನಿತ್ಯ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರೊಂದಿಗೆ ಕೇಳಲಾಗಿ, ಸಭೆಯಲ್ಲಿ ಹಾಜರಿದ್ದ ಶ್ರೀ ಅಜಯ್‌ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ, ಒಟ್ಟು 25 ಸಂಖ್ಯೆಗಳ ಬ್ಲಾಕ್‌ಗಳಿದ್ದು, ಪ್ರತಿ ಬ್ಲಾಕ್‌ಗಳಲ್ಲಿರುವ 750 ಮನೆಗಳಿಗೆ 1 ರಂತೆ ಒಟ್ಟು 25 ಆಟೋ ಟಿಪ್ಪರ್‌ಗಳಿದ್ದು, 3 ಕಾಂಪ್ಯಾಕ್ಟರ್‌ಗಳಿರುತ್ತವೆ. ದಿನನಿತ್ಯ ಬೆಳಗ್ಗೆ 7:00 ಗಂಟೆ ಒಳಗಾಗಿ ಮಸ್ಟ್ರಿಂಗ್ ಸ್ಥಳದಲ್ಲಿ ಆರ್.ಎಫ್.ಐ.ಡಿ ಸ್ಕ್ಯಾನ್ ಮುಖೇನ ಹಾಜರಾತಿಯನ್ನು ಪಡೆದು, ನಿಯೋಜಿಸಿರುವ ಬ್ಲಾಕ್‌ಗಳಿಗೆ ಆಟೋ ಟಿಪ್ಪರ್‌ಗಳನ್ನು ಕಸ ಸಂಗ್ರಹಣೆಗೆ ಕಳುಹಿಸಲಾಗುತ್ತದೆ. ಪ್ರತಿನಿತ್ಯ ಬೆಳಗ್ಗೆ 7:30 ರಿಂದ 10.30 ರವರೆಗೆ ವಾರದ 2 ದಿನ ಅಂದರೆ ಬುಧವಾರ ಮತ್ತು ಶನಿವಾರ ಮನೆ ಮನೆಗಳಿಂದ ಒಣ ಕಸ ಮತ್ತು ಸ್ಯಾನಿಟರಿ ಕಸವನ್ನು ಪ್ರತೇಕವಾಗಿ ಪೇಪರ್‌ನಲ್ಲಿ ಪಡೆದು ಸಂಗ್ರಹಿಸಲು ಮತ್ತು ಇನ್ನುಳಿದ 5 ದಿನಗಳಲ್ಲಿ ಹಸಿ ಕಸ

ಮತ್ತು ಸ್ಯಾನಿಟರಿ ಕಸವನ್ನು ಪ್ರತ್ಯೇಕವಾಗಿ ಬಿನ್‌ಗಳಲ್ಲಿ ಪಡೆದು ಸಂಗ್ರಹಿಸಲಾಗುವುದು. ಸಂಗ್ರಹಿಸಲಾಗುವ ಒಣಕಸವನ್ನು ಒಣ ತ್ಯಾಜ್ಯ ಸಂಗ್ರಹಣಾ ಘಟಕಕ್ಕೆ ವಿಲೇವಾರಿ ಮಾಡಲಾಗುವುದು ಹಾಗೂ ವಿಂಗಡಿಸಿದ ಹಸಿ ಕಸ ಮತ್ತು ಮಿಶ್ರ ತ್ಯಾಜ್ಯವನ್ನು ಆದರದ ಕಾಂಪ್ಯಾಕ್ಟರ್‌ಗಳಿಗೆ ವಿಲೇವಾರಿ ಮಾಡಲಾಗುತ್ತದೆ ಎಂದು ವಿವರವಾಗಿ ಸಭೆಯಲ್ಲಿ ತಿಳಿಸಿದರು.

3) ಬೆಸ್ಕಾಂ ಇಲಾಖೆಯ ಬಗ್ಗೆ.

ಕಳೆದ ಸಭೆಯಲ್ಲಿ ಅಧ್ಯಕ್ಷರು ಪ್ರಸ್ತಾಪಿಸಲಾಗಿದ್ದ ತಾವರೆಕೆರೆ ಮುಖ್ಯರಸ್ತೆಯಲ್ಲಿ ವಿದ್ಯುತ್ ವೈರ್‌ಗಳು ಕಂಬದ ಅಲ್ಲಿ ಬಿದ್ದಿರುವುದರಿಂದ ಅಪಘಾತಗಳಾಗುವ ಸಂಭವವಿರುತ್ತದೆ. ಆದುದರಿಂದ ಕೂಡಲೇ ಸದರಿ ಪ್ರದೇಶದ ವಿದ್ಯುತ್ ಕಂಬಗಳನ್ನು ಗುರುತಿಸಿ ದುರಸ್ಥಿ ಪಡಿಸಲು ಸೂಚಿಸಲಾಗಿತ್ತು.

ಈ ಸಂಬಂಧ ಬೆಸ್ಕಾಂ ಇಲಾಖೆಯವರು ಅಗತ್ಯಕ್ರಮಗಳನ್ನು ವಹಿಸಲಾಗಿರುತ್ತದೆ.

ಹಾಗೂ ತಾವರೆಕೆರೆ ಮುಖ್ಯರಸ್ತೆಯಲ್ಲಿನ ಟ್ರಾನ್ಸ್‌ಫಾರ್ಮರ್ ಒಳಗಡೆ ಡೆಬರೀಸ್ ಇರುವುದು ಕಂಡುಬಂದಿದ್ದು, ಟ್ರಾನ್ಸ್‌ಫಾರ್ಮರ್‌ಗಳನ್ನು ಆಸಮಯಕ್ಕೆ ಸ್ಥಗಿತಗೊಳಿಸಿದರೆ ಪಾಲಿಕೆ ಇಂಜನಿಯರಿಂಗ್ ವಿಭಾಗದವರು ಡೆಬರೀಸ್‌ನ್ನು ತೆರವುಗೊಳಿಸುತ್ತಾರೆ ಎಂದು ಹೇಳಿದ್ದರು.

ಈ ಸಂಬಂಧ ವಾರ್ಡ್ ಅಭಿಯಂತರರು ಮಾತನಾಡಿ ಕಾರಣಾಂತರಗಳಿಂದ ಡೆಬರೀಸ್ ತೆರವುಗೊಳಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸುತ್ತಾ, ಬರುವ ಸಭೆಯೊಳಗಾಗಿ ತೆರವುಗೊಳಿಸಲಾಗುವುದೆಂದು ಕೇಳಿಕೊಂಡರು.

ತಾವರೆಕೆರೆ ಮುಖ್ಯರಸ್ತೆ ಹೆಲ್ತ್ ಇಂಡಿಯಾ ಆಸ್ಪತ್ರೆಯ ಮುಂಭಾಗ ಚರಂಡಿಯ ಮಧ್ಯದಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸಿರುತ್ತಾರೆ. ಇದರಿಂದ ಚರಂಡಿ ನೀರು ಸರಾಗವಾಗಿ ಹರಿಯದೇ ಕಸ ಮತ್ತು ಇತರ ಅವಶೇಷಗಳಿಂದ ಕಟ್ಟಿ ನೀರು ರಸ್ತೆಯಲ್ಲಿ ಹರಿಯುತ್ತಿರುತ್ತದೆ. ಈ ಸಂಬಂಧ ಟ್ರಾನ್ಸ್‌ಫಾರ್ಮರ್‌ನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸುವ ಕುರಿತು ಬೆಸ್ಕಾಂ ಇಲಾಖೆ ಮತ್ತು ಪಾಲಿಕೆ ಅಭಿಯಂತರರು ಜಂಟಿಯಾಗಿ ತಪಾಸಣೆ ನಡೆಸಿ ಮುಂದಿನ ಸಭೆಯಲ್ಲಿ ವರದಿ ಸಲ್ಲಿಸಲು ಕಳೆದ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು.

ಈ ವಿಷಯದ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಬೆಸ್ಕಾಂ ಇಲಾಖೆಯವರೊಂದಿಗೆ ಜಂಟಿಯಾಗಿ ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಚರಂಡಿಯಲ್ಲಿದ್ದ ಹೂಳನ್ನು ತೆರವುಗೊಳಿಸಿ ನೀರನ್ನು ಸರಾಗವಾಗಿ ಹರಿಯಲು ಅನುವುಮಾಡಲಾಗಿರುತ್ತದೆ ಹಾಗೂ ಚರಂಡಿಯಿಂದ ತೆರವುಗೊಳಿಸಿದ್ದ ಹೂಳನ್ನು ಕೂಡಲೇ ವಿಲೇವಾರಿಮಾಡುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಅಧ್ಯಕ್ಷರು ಮಾತನಾಡಿ, ಸಿ.ಸಿ.ಟಿ.ವಿ ಅಳವಡಿಸಿರುವ ಬಗ್ಗೆ ವರದಿ ಕೇಳಲಾಗಿ, ವಾರ್ಡ್ ಅಭಿಯಂತರರು ಮಾತನಾಡಿ ಸಿ.ಸಿ.ಟಿ.ವಿ ಅಳವಡಿಸುವ ಕಾಮಗಾರಿ ಪೂರ್ಣಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ.

ಶ್ರೀ.ಜೆನ್‌ಸನ್.ಕೆ ಮಾತನಾಡಿ, ಭುವನಪ್ಪ ಬಡಾವಣೆ ಮತ್ತು ಸುತ್ತಮುತ್ತಲಿನ ಸಾರ್ವಜನಿಕ ಪ್ರದೇಶದಲ್ಲಿ ಧೂಮಪಾನ ಮಾಡುತ್ತಿರುವುದು ಹೆಚ್ಚಾಗಿರುತ್ತದೆ ಇದರ ಬಗ್ಗೆ ಅಗತ್ಯಕ್ರಮವಹಿಸಲು ತಿಳಿಸಿರುತ್ತಾರೆ.

ಈ ಬಗ್ಗೆ ಮಡಿವಾಳ ಆರಕ್ಷಕ ಉಪನಿರೀಕ್ಷಕರು ಮಾತನಾಡಿ ಇಂದೇ ಸೂಕ್ತಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

ಅಧ್ಯಕ್ಷರು ಮಾತನಾಡಿ, ಸೆಂಟ್‌ಜಾನ್ಸ್‌ವುಡ್ ಅಪಾರ್ಟ್‌ಮೆಂಟ್ ಮುಂಭಾಗ ರಸ್ತೆಗುಂಡಿಬಿದ್ದಿರುವುದು ಕಂಡುಬಂದಿದ್ದು, ಈ ಬಗ್ಗೆ ಪಾಲಿಕೆ ಅಭಿಯಂತರರು, ಬೆಸ್ಕಾಂ ಇಲಾಖೆ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಜಂಟಿಯಾಗಿ ಸ್ಥಳ ಪರಿಶೀಲಿಸಿ ಅಗತ್ಯಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ ಹಾಗೂ ಸಂಚಾರಿ ಪೊಲೀಸ್‌ರವರಿಗೆ ವಾರ್ಡ್ ವ್ಯಾಪ್ತಿಯಲ್ಲಿ ಮಳೆ ನೀರು ನಿಲ್ಲುತ್ತಿರುತ್ತಿರುವುದು, ಬೀದಿ ದೀಪ ದುರಸ್ಥಿಯಾಗಿರುವುದು ಹಾಗೂ ರಸ್ತೆಗುಂಡಿಗಳು ಬಿದ್ದಿರುವುದು ಕಂಡುಬಂದರೆ ಕೂಡಲೆ ಅವುಗಳನ್ನು ಗುರುತಿಸಿ ಪಾಲಿಕೆ ಅಭಿಯಂತರರಿಗೆ ತಿಳಿಸಲು ಹೇಳಿರುತ್ತಾರೆ ಮತ್ತು ಶ್ರೀ.ಅಜಯ್ ಕಿರಿಯ ಆರೋಗ್ಯ ಪರಿವೀಕ್ಷರೊಂದಿಗೆ ಚರ್ಚಿಸಿ ಮಸ್ಟಿಂಗ್ ಮಾಡುವ ಸ್ಥಳ, ಆಟೋ ಟಿಪ್ಪರ್, ಕಾಂಪ್ಯಾಕ್ಟರ್ ಮತ್ತು ಕಸ ವಿಂಗಡಣೆ ಮಾಡುವ ಛಾಯ ಚಿತ್ರಗಳನ್ನು ಪ್ರತಿ ದಿನ 7 ಗಂಟೆಯೊಳಗಾಗಿ ವಾರ್ಡ್ ಕಮಿಟಿ 152 ವಾಟ್ಸ್‌ಪ್ ಗ್ರೂಪ್‌ನಲ್ಲಿ ಕಳುಹಿಸಲು ಸೂಚಿಸಲಾಯಿತು.

ಸಭೆಯಲ್ಲಿದ್ದ ಬೆಸ್ಕಾಂ ಅಧಿಕಾರಿಗಳಿಗೆ ವಾರ್ಡ್‌ವ್ಯಾಪ್ತಿಯಲ್ಲಿ ದುರಸ್ಥಿ ಸ್ಥಿತಿಯಲ್ಲಿರುವ ವಿದ್ಯುತ್‌ಕಂಬಗಳು ಕಂಡುಬಂದರೆ ಕೂಡಲೇ ತೆರವುಗೊಳಿಸಲು ಸೂಚಿಸಿರುತ್ತಾರೆ.

ವಾರ್ಡ್‌ವ್ಯಾಪ್ತಿಯ ಎಲ್ಲಾ ರಸ್ತೆಗಳ ಕರ್ಬ್ ಕಲ್ಲುಗಳಿಗೆ ಇನ್ನುಮುಂದೆ ಇಂಜನಿಯರಿಂಗ್ ಸ್ಪೆಸಿಫಿಕೇಷನ್ ಪ್ರಕಾರ ಕಪ್ಪು ಬಿಳುಪು ಬಣ್ಣ ಬಳಿಯಲ್ಲಿ ವಾರ್ಡ್ ಅಭಿಯಂತರರಿಗೆ ತಿಳಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರು ಮಾತನಾಡಿ, ವಾರದಲ್ಲಿ ರೂ 25.00 ಲಕ್ಷಗಳು ಕಂದಾಯ ಸಂಗ್ರಹಿಸುವ ಗುರಿ ನಿಗಧಿಪಡಿಸಿದ್ದು, ವಾರದ ಬುಧುವಾರದಂದು ಕಂದಾಯ ಅಧಿಕಾರಿಗಳು ಮತ್ತು ಸಹಾಯಕ ಕಂದಾಯ ಅಧಿಕಾರಿಗಳ ಸಹಭಾಗಿತ್ವದಲ್ಲಿ ಕಂದಾಯ ಸಂಗ್ರಹಿಸುವ ಡ್ರೈವ್‌ನ್ನು ನಿಗಧಿಪಡಿಸಲಾಗಿರುತ್ತದೆ ಎಂದು ತಿಳಿಸಿದರು.

ಕೊನೆಯದಾಗಿ, ಅಧ್ಯಕ್ಷರು ಮಾತನಾಡಿ ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್-152 ಎಸ್.ಜಿ.ಪಾಳ್ಯ

(ಶ್ರೀ. ಎಸ್.ಪ್ರಭಾಕರ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್-152 ಎಸ್.ಜಿ.ಪಾಳ್ಯ

**ಪ್ರತಿಯನ್ನು:**

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ-ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ